**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 1313/2018**

**ಸಿ ಡಬ್ಲ್ಯೂ -1**

**ಪಿ ಡಬ್ಲ್ಯೂ -1**

| | |
|---|---|
| ಸಾಕ್ಷಿ ಹೆಸರು - | ಆಸ್ಮಾ |
| ಗಂಡನ ಹೆಸರು- | ಮೀಯಾ ಸಾಬ |
| ವಯಸ್ಸು - | **42** ವರ್ಷಗಳು |
| ಉದ್ಯೋಗ - | ಖಾಸಗಿ ಕೆಲಸ |
| ವಾಸಸ್ಥಳ - | ಹೊಸಪೇಟೆ |

**ಸಾಕ್ಷಿಯನ್ನು ದಿನಾಂಕಃ 09-10-2023 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನನ್ನ ಮದುವೆ ದಿಃ **26-12-2007** ರಂದು ಆರೋಪಿಯ ಜೊತೆಗೆ ಅಂಜುಮನ್ ಶಾದಿ ಮಹಲ್ ನಲ್ಲಿ ನಮ್ಮ ಮುಸ್ಲಿಂ ಸಂಪ್ರದಾಯದಂತೆ ಮದುವೆ ನಡೆಯಿತು.

ಮದುವೆ ಕಾಲಕ್ಕೆ ಆರೋಪಿ **10** ಗ್ರಾಂ. ಚಿನ್ನ, ರೂ. **1,00,000/-** ಮನೆ ಸಾಮಾನುಗಳು, ಮತ್ತು ನಮ್ಮ ತಂದೆಯವರು ರೂ. **3,00,000/-** ಹಣ ಖರ್ಚು ಮಾಡಿ ನನ್ನ ಮದುವೆ ಮಾಡಿಕೊಟ್ಟಿರುತ್ತಾರೆ. ನಂತರ ನಾನು ಬಾಳ್ವೆ ಮಾಡಲು ಆರೋಪಿಯ ಊರಾದ ಬಾಗಲಕೋಟೆ ಜಿಲ್ಲೆಯ ಇಳಕಲ್ ಗೆ ಅವರ ಮನೆಗೆ ಹೋದೆನು.

ಮದುವೆಯಾದ **2** ದಿನಗಳ ನಂತರ ಆರೋಪಿಗೆ ನನ್ನ ಮದುವೆ ಆಗುವುದಕ್ಕಿಂತ ಮುಂಚೆ ಮದುವೆಯಾಗಿತ್ತು ಅವರ ಮೊದಲನೆ ಹೆಂಡತಿ ಹೆಸರು ಯಾಸ್ಮಿನ್ ಇವರು ಅಘಾತದಲ್ಲಿ ಮರಣ ಹೊಂದಿದ್ದು ಅವರಿಗೆ ಒಂದು ಹೆಣ್ಣು ಮಗು ಇದೆ ಅಂತಾ ಗೊತ್ತಾಯಿತು.

ಆರೋಪಿ ಈ ವಿಷಯವನ್ನು ಮರೆ ಮಾಚಿ ಮೋಸ ಮಾಡಿ ನನ್ನ ಜೊತೆಗೆ ಮದುವೆ ಮಾಡಿಕೊಂಡಿರುತ್ತಾನೆ.

ಈ ವಿಷಯ ನಮ್ಮ ತಂದೆ ಮತ್ತು ಹಿರಿಯರಿಗೆ ತಿಳಿಸಿದಾಗ ನಿನ್ನ ಹಣೆಬರಹ ಹೀಗೆ ಇದೆ ಹೋಗಿ ಬಾಳ್ವೆ ಮಾಡು ಅಂತಾ ಹೇಳಿದರು. ನಾನು ಗಂಡನ ಮನೆಗ ಹೋದಾಗ ಸ್ವಲ್ಪ ದಿನಗಳ ವರೆಗೆ ಆರೋಪಿ ಚೆನ್ನಾಗಿ ನೋಡಿಕೊಂಡು ನಂತರ ಮಾನಸಿಕ, ದೈಹಿಕ ಚಿತ್ರ ಹಿಂಸೆ ಕೊಡಲು ಶುರು ಮಾಡಿದ. ಆತನಿಗೆ ಇನ್ನೂ ಹೆಚ್ಚಿನ ವರದಕ್ಷಿಣೆ ಬೇಕು ಎಂದು ಹೊಡೆಯುವುದು, ಬಡಿಯುವುದು ಮನೆಯ ಪಾತ್ರೆಗಳನ್ನು ಎಸೆಯುವುದು ಮಾಡುತ್ತಿದ್ದ.

ನಂತರ ಆರೋಪಿ ತನಗೆ ಬ್ಯುಜಿನೆಸ್ ಮಾಡಲು ಹಣವನ್ನು ರೂ. 1,00,000/- ತೆಗೆದುಕೊಂಡು ಬಾ ಅಂತಾ ಪೀಡಿಸುತ್ತಿದ್ದನು. ಈ ವಿಷಯವನ್ನು ನಮ್ಮ ತಂದೆಗೆ ಹೇಳಿದಾಗ ನನಗೆ ಹಾಕಿದ ಬಂಗಾರವನ್ನು ಆರೋಪಿಗೆ ಉಪಯೋಗಿಸಲು ಕೊಟ್ಟು ಬಿಡು ಅಂತಾ ಹೇಳಿದರು. ನನಗೆ 9 ತೊಲೆ ಬಂಗಾರವನ್ನು ಹಾಕಿದ್ದರು ಅದನ್ನು ಆರೋಪಿಗೆ ಉಪಯೋಗಿಸಲು ಕೊಟ್ಟೇನು. ಆತ ಪೈನಾನ್ಸ ನಲ್ಲಿ ಒತ್ತೆ ಇಟ್ಟು ಸಾಲ ಪಡೆದು ನನಗೆ ಬಿಡಿಸಿ ಕೊಟ್ಟಿರುವುದಿಲ್ಲ ಈ ಸಂಸಾರ ಜಂಜಾಟದಲ್ಲಿ 2 ಮಕ್ಕಳು ಆದವು. 2 ಮಕ್ಕಳ ವಿದ್ಯಾಭ್ಯಾಸಕ್ಕೆ ಹಣ ನೀಡಲಿಲ್ಲ. ಮತ್ತೆ ನನ್ನ ವ್ಯಾಪಾರಕ್ಕೆ ಹಣ ಬೇಕು ಅಂತಾ ಪೀಡಿಸುತ್ತಿದ ಈ ಸಮಯದಲ್ಲಿ ನಮ್ಮ ತಂದೆ ತೀರಿ ಹೋದರು.

ನಮ್ಮ ತಾಯಿ ವಿಧವೆಯಾದ ಕಾರಣ ಆರೋಪಿ ಕೇಳಿದ ಹಣ ಅಡಜಸ್ಟ ಮಾಡಲು ಆಗದೇ ನವೆಂಬರ್ 2016 ರಲ್ಲಿ ಗಂಡನ ಮನೆಯಿಂದ ತವರು ಮನೆಗೆ ಬಂದೆ. ಆರೋಪಿ ದಿಃ 25-06-2017 ರಂದು ಹೊಸಪೇಟೆಗೆ ನಮ್ಮ ಮನೆಗೆ ಬಂದು ಅವ್ಯಾಚ್ಯ ಶಬ್ಧಗಳಿಂದ ಬೈದು ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು, ಮಕ್ಕಳೊಂದಿಗೆ ಇಳಕಲ್ ಗೆ ಬಾ ಅಂತಾ ಹೊಡೆದು ಬಡಿದರು.

**ಸಿ ಡಬ್ಲ್ಯೂ -1**
**ಪಿ ಡಬ್ಲ್ಯೂ -1**

ಅಕ್ಕಪಕ್ಕದವರು ಬುದ್ಧಿ ಹೇಳಿದ ಕಾರಣ ಆರೋಪಿ ಹೋದನು. ದಿಃ 14-08-2017 ರಂದು ಮತ್ತೊಮ್ಮೆ ನಮ್ಮ ಮನೆಗೆ ಬಂದು ನನಗೆ ನನ್ನ ತಾಯಿಗೆ ನನ್ನ ಅಣ್ಣನಿಗೆ ಅವ್ಯಾಚ್ಯ ಶಬ್ಧಗಳಿಂದ ಬೈದು, ಚೇರ್ ನಿಂದ ಹೊಡೆದು ಮನೆಗೆ ಬಂದಿಲ್ಲ ಅಂದರೆ ಮಕ್ಕಳನ್ನು ಅಪಹರಣ ಮಾಡಿಕೊಂಡು ಹೋಗುತ್ತೇನೆ ಎಂದು ಹೆದರಿಸಿದನು.

ನನಗೆ ರಾಜಕಾರಣಿಗಳು ಪರಿಚಯ ಇದ್ದು ನಾನು ಪತ್ರ ಕರ್ತ ಇದ್ದು ಪೋಲಿಸರು ಗೊತ್ತು ನನ್ನನ್ನು ಏನೂ ಮಾಡಿಕೊಳ್ಳಲು ಆಗುವುದಿಲ್ಲ ಅಂತಾ ಹೆದರಿಸಿದರು. ಆಗ ಅಕ್ಕಪಕ್ಕದವರು ಕೂಡಿದರು. ಮತ್ತೇ ಆರೋಪಿಗೆ ತಿಳಿ ಹೇಳಿ ಕಳಿಸಿದರು. ನಂತರ ಈ ಖಾಸಗಿ ದೂರು ಸಲ್ಲಿಸಿದೆನು.

ನನ್ನ ದೂರನ್ನು ನಿಪಿಃ 1 ಎಂದು, ಕೊನೆಯ ಪುಟದ ಸಾಕ್ಷಿಯ ಸಹಿಯನ್ನು ನಿಪಿಃ 1 (ಎ) ಎಂದು ಗುರುತಿಸಲಾಯಿತು. ನಂತರ ನಾನು ದಿಃ 13-09-2017 ರಂದು ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ.

ನಂತರ 14-09-2017 ರಂದು ಆಜಾದ್ ನಗರ 1 ನೇ ಕ್ರಾಸ್ ನಲ್ಲಿ ನಮ್ಮ ಮನೆಯಲ್ಲಿ ನಾನು ತೋರಿಸಿದ ಮೇರೆಗೆ ಪೋಲಿಸರು ಪಂಚರ ಸಮಕ್ಷಮ ಬೆಳಿಗ್ಗೆ 10-00 ರಿಂದ 11-00 ಗಂಟೆಯವರೆಗೆ ಪಂಚನಾಮೆ ಮಾಡಿದರು.

ಪಂಚನಾಮೆಯನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2 (ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳನ್ನು ನಿಪಿಃ 3 ಮತ್ತು 4 ಎಂದು ಗುರುತಿಸಲಾಯಿತು.

ಅದೇ ದಿನ ಹೊಸಪೇಟೆ ಅಂಜುಮನ್ ಶಾದಿ ಮಹಲ್ ನಲ್ಲಿ ಪಂಚನಾಮೆಯನ್ನು ಬೆಳಿಗ್ಗೆ 11-30 ರಿಂದ 12-00 ಗಂಟೆಗೆವರೆಗೆ ಮಾಡಿದರು. ಸದರಿ ಪಂಚನಾಮೆಯನ್ನು ನಿಪಿಃ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 5 (ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಫೋಟೋವನ್ನು ನಿಪಿಃ 6 ಎಂದು ಗುರುತಿಸಲಾಯಿತು.

ದಿಃ 18-09-2017 ರಂದು ಇಳಕಲ್ ನ ಆರೋಪಿಯ ಮನೆಯಲ್ಲಿ ಪಂಚನಾಮೆಯನ್ನು ಬೆಳಿಗ್ಗೆ 11-00 ರಿಂದ 03-00 ಗಂಟೆಗೆವರೆಗೆ ಮಾಡಿದರು. ಸದರಿ ಪಂಚನಾಮೆಯನ್ನು ನಿಪಿಃ 7 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 7 (ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಫೋಟೋವನ್ನು ನಿಪಿಃ 8 ಎಂದು ಗುರುತಿಸಲಾಯಿತು. ನಿಖಾ ನಾಮಾ ವನ್ನು ನಿಪಿಃ 9 ಎಂದು, ಮದುವೆ ಕರೆಯೋಲೆಯನ್ನು ನಿಪಿಃ 10 ಎಂದು, ಮದುವೆ ಕಾಲಕ್ಕೆ ತೆಗೆದ ಫೋಟೋಗಳನ್ನು ಮತ್ತು ಆರೋಪಿಗೆ ಕೊಟ್ಟ ಸಾಮಾನುಗಳ ಫೋಟೋ ನಿಪಿಃ 11 ರಿಂದ 17 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್ ವಿ ಬಿ ವಕೀಲರಿಂದಃ**

**(ಈ ಹಂತದಲ್ಲಿ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ, ರೂ. 500/- ದಂಡದೊಂದಿಗೆ ಪಾಟೀ ಸವಾಲು ಮುಂದೂಡಲಾಯಿತು.)**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.